### ಆರು ಎಕರೆ ಅರಣ್ಯಭೂಮಿ ನಿಯಮ ಮೀರಿ ಖಾಸಗಿಗೆ ಪರಭಾರೆ | ವಸತಿ ಸಮುಚ್ಚಯ ನಿರ್ಮಾಣದ ವಿರುದ್ಧ ಎದ್ದಿದೆ ಭಾರಿ ಕೂಗು

# ಬಿಟ್ಟು ಹೋದ ಸ್ಯಾಂಕಿ ಕೆರೆ; ನಾಗರಿಕರಿಂದ ಅಭಿಯಾನದ ಕರೆ

• **ಚಾಮರಾಜ ಸವಡಿ** ಬೆಂಗಳೂರು

ಬ್ರಿಟಿಷರ ಕಾಲದಲ್ಲಿ ಕೆರೆ ದಂಡೆಯ ಮೇಲೆ, ಅರಣ್ಯ ಇಲಾಖೆಯ ಪ್ರಧಾನ ಕಚೇರಿ ಪಕ್ಕದಲ್ಲಿದ್ದ 7.2 ಎಕರೆ ಭೂಮಿಯನ್ನು ಔಷಧ ಕಂಪನಿಯೊಂದಕ್ಕೆ ಗುತ್ತಿಗೆ ಕೊಡಲಾಗುತ್ತದೆ. ಕಾಲಾಂತರದಲ್ಲಿ ಅದು ಬೆಂಗಳೂರಿನ ಹೃದಯಭಾಗ ಎನಿಸುವುದಲ್ಲದೇ, ಅತ್ಯಮೂಲ್ಯ ಕೆರೆ ದಂಡೆಯ ಮೇಲಿನ ಈ ಭೂಮಿಗೆ ಬೆಲೆಬಾಳುತ್ತದೆ. ಆ ಭೂಮಿಯಲ್ಲಿ ಈಗ 6 ಎಕರೆಯನ್ನು ನಿಯಮಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ಮಾರಲಾಯಿತು. ಸದ್ಯ ಅಲ್ಲಿ ಐಷಾರಾಮಿ ವಸತಿ ಸಮುಚ್ಚಯ ನಿರ್ಮಾಣಕ್ಕೆ ಸಿದ್ಧತೆಗಳು ನಡೆದಿದ್ದು, ಈ ಬೆಳವಣಿಗೆ ನಾಗರಿಕ ದೊಡ್ಡ ಪ್ರಮಾಣದ ಆಂದೋಲನಕ್ಕೆ ತಿರುಗುವ ಲಕ್ಷಣಗಳು ಕಾಣಿಸುತ್ತಿವೆ.

ನಗರದ ಹೃದಯಭಾಗದಲ್ಲಿರುವ ಮಲ್ಲೇಶ್ವರದ ಸ್ಯಾಂಕಿ ಕೆರೆಯ ದಂಡೆಯೇ ಈ ಬೆಳವಣಿಗೆಗೆ ವೇದಿಕೆ. ಮೂಲತಃ ಅರಣ್ಯ ಇಲಾಖೆಗೆ ಸೇರಿದ 7.2 ಎಕರೆ ವಿಸ್ತಾರದ ಈ ಭೂಮಿಯನ್ನು ಜನವರಿ 10, 1945ರಂದು ಸರ್ಕಾರದ ಮೆಸರ್ಸ್ ಇಂಡಸ್ಟ್ರಿಯಲ್ ಆ್ಯಂಡ್ ಟೆಸ್ಟಿಂಗ್ ಲ್ಯಾಬೊರೇಟರೀಸ್ ಕಂಪನಿಗೆ ಗುತ್ತಿಗೆ ನೀಡಲಾಯಿತು. ನಿಯಮಗಳ ಪ್ರಕಾರ, ಗುತ್ತಿಗೆ ಪಡೆದ ಭೂಮಿಯನ್ನು ಯಾವ ಕಾರಣಕ್ಕೂ ಗುತ್ತಿಗೆ, ಮಾರಾಟ ಅಥವಾ ಇನ್ಯಾವುದೇ ರೀತಿಯಲ್ಲಿ ಪರಭಾರೆ ಮಾಡುವಂತಿಲ್ಲ. ಹಾಗೇನಾದರೂ ಆದರೆ, ಭೂಮಿ ವಾಪಸ್ ಅರಣ್ಯ ಇಲಾಖೆ ಸುಪರ್ದಿಗೆ ಹೋಗುತ್ತದೆ ಎಂಬ ಷರತ್ತು ವಿಧಿಸಲಾಗಿತ್ತು.

ಆದರೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹಲವಾರು ಪರಿಸರ ಸಂಬಂಧಿ ನಿಯಮಗಳ ಅಡಿಯಲ್ಲಿ ರಕ್ಷಿತವಾಗಿರುವ ಸ್ಯಾಂಕಿ ಕೆರೆ ದಂಡೆಯ ಮೇಲೆ, ಸರ್ಕಾರಗಳ ನಿಯಮಗಳಿಗೆ ವಿರುದ್ಧವಾಗಿ ವಸತಿ ಸಮುಚ್ಚಯ ನಿರ್ಮಾಣಕ್ಕೆ ಸಿದ್ಧತೆಗಳು ನಡೆಯುತ್ತಿರುವುದು ನಾಗರಿಕರನ್ನು ಕೆರಳಿಸಿದೆ. ↘ III



ನಾಗರಿಕ ಹಾಗೂ ಕಾನೂನು ಆಂದೋಲನಕ್ಕೆ ವೇದಿಕೆಯಾಗಲಿರುವ ಮಲ್ಲೇಶ್ವರದ ಸ್ಯಾಂಕಿ ಕೆರೆ.

**ಯಾಕೆ ಅಭಿಯಾನ?**

- ಅರಣ್ಯ ಇಲಾಖೆ ಗುತ್ತಿಗೆ ನೀಡಿದ್ದ ಭೂಮಿಯನ್ನು ಮಾರಾಟ
- ಅದೇ ಜಾಗದಲ್ಲಿ 24 ಅಂತಸ್ತಿನ ವಸತಿ ಸಮುಚ್ಚಯ ನಿರ್ಮಾಣ
- ನಿಯಮದ ಪ್ರಕಾರ ಗುತ್ತಿಗೆ ಭೂಮಿ ಮಾರಾಟ ಮಾಡುವಂತಿಲ್ಲ
- ಇದುವೆ ಸ್ಯಾಂಕಿ ಉಳಿಸುವ ಅಭಿಯಾನಕ್ಕೆ ಪ್ರಮುಖ ಪ್ರೇರಣೆ

**ರಾಜಧಾನಿಯ ಹೃದಯಭಾಗದಲ್ಲಿರುವ ಜೈವಿಕಸೂಕ್ಷ್ಮ ಪ್ರದೇಶದಲ್ಲಿ ವಸತಿ ಸಮುಚ್ಚಯ ಕಟ್ಟುವ ವಿಚಾರವೇ ಆಘಾತಕಾರಿ. ಹೀಗಿದ್ದರೂ, ಎಲ್ಲ ನಿಯಮಗಳನ್ನು ಉಲ್ಲಂಘಿಸಿ ಅಂಥದೊಂದು ಕ್ರಮಕ್ಕೆ ಮುಂದಾಗುತ್ತಿರುವುದನ್ನು ಕಾನೂನು ಹಾಗೂ ನಾಗರಿಕ ಹೋರಾಟದ ಮೂಲಕ ಪ್ರತಿಭಟಿಸಲಿದ್ದೇವೆ.**

• **ಚಿದಾನಂದ ಕುಲಕರ್ಣಿ** ಹಿರಿಯ ವಕೀಲರು ಮಲ್ಲೇಶ್ವರ

# ನಾಗರಿಕರಿಂದ ಅಭಿಯಾನದ ಕರೆ

ಮೊದಲ ಪುಟದಿಂದ

ಇದುವೇ ಸ್ಯಾಂಕಿ ಕೆರೆ ಉಳಿಸಿ ಅಭಿಯಾನಕ್ಕೆ ಮೂಲ ಪ್ರೇರಣೆ.

**ಅನಧಿಕೃತ ತಿದ್ದುಪಡಿ:** ಗುತ್ತಿಗೆ ಪಡೆದ ಭೂಮಿಯನ್ನು ಪರಭಾರೆ ಮಾಡಬಾರದೆಂಬ ನಿಯಮ ಉಲ್ಲಂಘಿಸಿ 6 ಎಕರೆ 1 ಗುಂಟೆ ಭೂಮಿಯನ್ನು ಮೇಸರ್ಸ್ ಮೈಸೂರು ಇಂಡಸ್ಟ್ರಿಯಲ್ ಟೆಸ್ಟಿಂಗ್ ಆ್ಯಂಡ್ ಲ್ಯಾಬೊರೇಟರಿ (ಎಂಐಟಿಎಲ್) ಸಂಸ್ಥೆಗೆ ವರ್ಗಾಯಿಸಲಾಯಿತು. ನಂತರ ಸಂಸ್ಥೆಯ ಮಾಲೀಕತ್ವವನ್ನು ಹೈದರಾಬಾದ್ ಮೂಲದ ಖಾಸಗಿ ಕಂಪನಿ ಮೇಸರ್ಸ್ ಇಂಡಿಯನ್ ಡೆಟೊನೇಟರ್ಸ್ ಲಿಮಿಟೆಡ್ (ಐಎಲ್‌ಡಿ)ಗೆ ಮಾರಲಾಯಿತು. ಬಾಕಿ ಉಳಿದ 1.2 ಎಕರೆಯನ್ನೂ ಈ ಸಂಸ್ಥೆಗೆ ನೀಡಲು ರಾಜ್ಯ ಸಚಿವ ಸಂಪುಟ ಅನುಮೋದಿಸಿತು. ಆದರೆ, ಸಂಪುಟದ ಒಪ್ಪಿಗೆಯಿಲ್ಲದೇ ಸ್ಪೆಷಲ್ ಆಫೀಸರ್ ಒಬ್ಬರು, ಹೊರಗುತ್ತಿಗೆ ಹಾಗೂ ಮಾರಾಟ ನಿರ್ಬಂಧಿಸಿದ್ದ ಷರತ್ತನ್ನು ಹಿಂಪಡೆದು ಆದೇಶವನ್ನೂ ಹೊರಡಿಸಿಬಿಟ್ಟರು. ಇದಕ್ಕೆ ಬಿಡಿಎ ಸಮ್ಮತಿಸಿತು.

ಇದಾದ ನಂತರ, ಐಎಲ್‌ಡಿ ಸಂಸ್ಥೆ ಗಲ್ಫ್ ಆಯಿಲ್ ಕಾರ್ಪೊರೇಶನ್ ಲಿಮಿಟೆಡ್ ಎಂದು ಹೆಸರು ಬದಲಿಸಿಕೊಂಡಿತಲ್ಲದೇ, ಈ ಭೂಮಿಯ ಪೈಕಿ 29,015 ಚದರ್ ಮೀಟರ್ ಭೂಮಿಯನ್ನು 24 ಅಂತಸ್ತಿನ ವಸತಿ ಸಮುಚ್ಚಯ ನಿರ್ಮಿಸಲು ಮಂತ್ರಿ ಗ್ರೂಪ್‌ನ ಅಭಿಷೇಕ್ ಡೆವಲಪರ್ಸ್‌ಗೆ ಮಾರಿತು. ಇಡೀ ಪ್ರಕ್ರಿಯೆಯನ್ನು ಪ್ರಶ್ನಿಸಿ ಹೈಕೋರ್ಟ್‌ನ ಏಕಸದಸ್ಯ ಪೀಠದ ಮುಂದೆ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆಯಲ್ಲಿ ಮಾರಾಟ ಕರಾರನ್ನು ಮನ್ನಿಸುವಂತೆ ತೀರ್ಪು ಹೊರಬಂದಿತು. ತೀರ್ಪು ಪ್ರಶ್ನಿಸಿ ಹೈಕೋರ್ಟ್‌ನ ವಿಭಾಗೀಯ ಪೀಠದ ಎದುರು ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಇತ್ಯರ್ಥಪಡಿಸಿ, ಏಕಸದಸ್ಯ ಪೀಠದ ತೀರ್ಪನ್ನು ಎತ್ತಿ ಹಿಡಿಯಲಾಗಿದೆ. ಕೊನೆಯ ತೀರ್ಪನ್ನು ನೀಡಿದ್ದು ಈಗ ಉಪ ಲೋಕಾಯುಕ್ತ ನೇಮಕಾತಿ ವಿವಾದದಲ್ಲಿರುವ ನಿವೃತ್ತ ನ್ಯಾ.ಕೆ.ಎಲ್. ಮಂಜುನಾಥ್.

ಜಲಮೂಲದ ದಂಡೆಯಲ್ಲಿ, ಜೀವ ವೈವಿಧ್ಯ ತಾಣದಲ್ಲಿ, ಹಸಿರುಪೀಠಗಳ ನಿಯಮಗಳನ್ನು ಉಲ್ಲಂಘಿಸಿ, ಮೂಲ ಕರಾರಿಗೆ ವ್ಯತಿರಿಕ್ತವಾಗಿ ಭೂಮಿ ಪಡೆದುಕೊಂಡಿರುವ ಪ್ರಕರಣ ಈಗ ನಾಗರಿಕ ಆಂದೋಲನಕ್ಕೆ ಕಾರಣವಾಗಿದೆ. ಅಳಿದು ಹೋಗುತ್ತಿರುವ ಕೆರೆಗಳನ್ನು ಮತ್ತು ಅವುಗಳನ್ನು ಅವಲಂಬಿಸಿದ ಜೀವ ವೈವಿಧ್ಯ ಉಳಿಸಲು ಸ್ಯಾಂಕಿ ಕೆರೆ ತಾಣದಲ್ಲಿ ಯಾವುದೇ ನಿರ್ಮಾಣ ಚಟುವಟಿಕೆಗಳು ನಡೆಯಬಾರದು ಎಂಬುದು ಆಂದೋಲನಕ್ಕೆ ಮುಂದಾಗಿರುವ ಏಳು ನಾಗರಿಕ ಸಂಘಟನೆಗಳು ಆ.17ರಿಂದ ಅಭಿಯಾನಕ್ಕೆ ಮುಂದಾಗಿವೆ. ಪಕ್ಕದಲ್ಲೇ ಇರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಅತ್ಯಂತ ವೈಜ್ಞಾನಿಕವಾದ ವರದಿಯನ್ನು ಮುಂದಿಟ್ಟುಕೊಂಡಿರುವ ಅರಣ್ಯ ಇಲಾಖೆ ಕಾನೂನು ಸಮರ ಸಾರಲು ಸಿದ್ಧವಾಗಿದೆ.